ಇದು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಮಹತ್ವವಾದಂಥ ಪ್ರಶ್ನೆ ಇರತಕ್ಕಂಥಾದ್ದು, ಆದ್ದರಿಂದಲೇ ನಾನು ಎಲ್ಲಾ ಪ್ರಶ್ನೆಗಳನ್ನೂ ಅಲೋ ಮಾಡಿದ್ದೇನೆ.

ಶ್ರೀ ಚಂದ್ರಶೇಖರ ಎಂ. ಮಾಮನಿ :- ಈಗ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಹೇಳಿ.

ಉಪಾಧ್ಯಕ್ಷರು :- ಒಂದು ನಿಮಿಷ, ಕುಳಿತುಕೊಳ್ಳಿ, ಡಾಕ್ಟರ್ ಪ್ರಶ್ನೆಗೆ ಉತ್ತರ ಕೊಡಿ. ಶಂಕರನಾಯಕ್ ಅವರ ಪ್ರಶ್ನೆಗೆ ಉತ್ತರ ಕೊಡಿ.

ಶ್ರೀ ಎಸ್. ಎಸ್. ಪಾಟೀಲ್ :- ಗೌರವಾನ್ವಿತ ಸದಸ್ಯರು ಕೇಳಿದಹಾಗೆ ಕೆಲವು ಕಡೆ ಕಾರ್ಯದರ್ಶಿಗಳು ಇದೆಲ್ಲಾ ದುಡ್ಡುಗಿಡ್ಡನ್ನು ಬುಕ್ ಸಹಿತ ತೆಗೆದುಕೊಂಡು ಇಟ್ಟು ಕೊಂಡು ಬಿಡುತ್ತಾರೆ. ಅದು ಸಿಗುವುದಿಲ್ಲ. ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಮಾತನ್ನು ಕೇಳಿದ್ದಾರೆ. ಇದು ಸ್ವಲ್ಪ ಕಠಿಣವಾದ ಸಮಸ್ಯೆ. ಇದಕ್ಕೆ ಈಗಾಗಲೇ ನಾವು ಏನೋ ಒಂದು ಕಡಿವಾಣ ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ತಮಗೆ ಹೇಳುವುದಾದರೆ ಈಗಾಗಲೇ ಹಲವಾರು ಅನುಭವಗಳು ನಮ್ಮ ಗಮನಕ್ಕೆ ಬಂದಿವೆ. ಅದಕ್ಕೆಲ್ಲಾ ಕಡಿವಾಣ ಹಾಕುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ವಿಷಯ :- ಚಿತ್ರದುರ್ಗ ಜಿಲ್ಲೆಯಲ್ಲಿ ತಂಪು ಮಳಿಗೆ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 405 (2962)

ಶ್ರೀ ಎಂ. ಚಂದ್ರಪ್ಪ (ಭರಮ ಸಾಗರ) :- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಈರುಳ್ಳಿ ಹಾಗೂ ತರಕಾರಿಗಳನ್ನು ಹೆಚ್ಚಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬೆಳೆದಂತ ಪದಾರ್ಥಗಳನ್ನು ಇಟ್ಟುಕೊಳ್ಳಲು ಸರಿಯಾದ ವ್ಯವಸ್ಥೆ ಇಲ್ಲದೆ ಕೊಳೆತು ಹಾಳಾಗುತ್ತಿರುವುದು ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಕಡೆ ತಂಪು ಮಳಿಗೆ (ಕೊಲ್ಡ್ ಸ್ಟೋರೇಜ್) ನ್ನು ಕಟ್ಟುವ ಉದ್ದೇಶ ಏನಾದರೂ ಇದೆಯೇ?

ಇ) ಇದ್ದರೆ ಅದನ್ನು 1995-96 ನೇ ಸಾಲಿಗೆ ಕಟ್ಟುವ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ಹೌದು

ಆ) ಇದೆ

ಇ) ಚಿತ್ರದುರ್ಗ ಜಿಲ್ಲೆಯೂ ಸೇರಿದಂತೆ ರಾಜ್ಯದಾದ್ಯಂತ ತೋಟಗಾರಿಕೆ ಉತ್ಪನ್ನಗಳಿಗೆ

ಶೀತಲ ಸರಪಳಿ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಒಂದು ಯೋಜನೆ ಯನ್ನು ಎನ್.ಸಿ.ಡಿ.ಸಿ. ಧನ ಸಹಾಯ ಕೋರಿ ಸಲ್ಲಿಸಲಾಗಿದೆ. ಪ್ರಸ್ತುತ ವರ್ಷದಲ್ಲಿಯೇ ಚಿತ್ರದುರ್ಗದಲ್ಲಿ ಶೈತ್ಯಾಗಾರ ನಿರ್ಮಿಸುವ ಕಾಲ ನಿರ್ಬಂದಿತ ಕಾರ್ಯಕ್ರಮ ಇರುವುದಿಲ್ಲ.

ಶ್ರೀ ಎಂ. ಚಂದ್ರಪ್ಪ :– ಸನ್ಮಾನ್ಯ ಉಪಾಧ್ಯಕ್ಷರೇ, ನನಗೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಮತ್ತು ನಾನು ಕೇಳಿರತಕ್ಕಂಥ ಪ್ರಶ್ನಗೆ ಈ ವರ್ಷ ಆಗುವುದಿಲ್ಲ ಎನ್ನುವ ಉತ್ತರ ವನ್ನು ಹೇಳಿದ್ದಾರೆ. ನಮ್ಮ ಚಿತ್ರದುರ್ಗ ಜಿಲ್ಲೆ ಬಹಳ ಹಿಂದುಳಿದಿರತಕ್ಕಂಥ ಪ್ರದೇಶ. ಅದು ಹೆಚ್ಚಾಗಿ ಈರುಳ್ಳಿಯನ್ನು ಬೆಳೆಯತಕ್ಕಂಥ ಪ್ರದೇಶ. ಈ ಬೆಳೆ ಮಳೆಗಾಲದಲ್ಲಿ ಜಾಸ್ತಿ ಬೆಳೆ ಯುತ್ತಾ ಇರುವುದರಿಂದ ಅಲ್ಲಿ ಕೋಲ್ಡ್ ಸ್ಟೋರೇಜ್ ಬಹಳ ಮುಖ್ಯವಾಗಿ ಬೇಕಾಗಿದೆ. ಆದ್ದರಿಂದ 1995-96 ನೇ ಸಾಲಿನಲ್ಲಿ ಇದನ್ನು ಮಾಡಬೇಕೆಂದು ಹಿಂದಿನಿಂದ ನಮ್ಮ ಸರ್ಕಾರ ವನ್ನು ಕೇಳುತ್ತಲೇ ಬಂದಿದ್ದೇವೆ. ಸನ್ಮಾನ್ಯ ಜಾಲಪ್ಪನವರು ಇದ್ದಾಗ ಈ ವ್ಯವಸ್ಥೆಯನ್ನು ನಾವು ಆದಷ್ಟು ಜಾಗ್ರತೆ ಮಾಡುತ್ತೇವೆ ಎಂದು ಹೇಳಿದ್ದು ಉಂಟು. ಆದರೆ ಈ ಬೆಳೆದಂಥ ಬೆಳೆ ಮಾರಾಟಕ್ಕೆ ಸಿಗದೆ ಎಷ್ಟೋ ರೈತರು ಬಹಳ ಹಾಳಾಗಿ, ಹಿಂದೆ ಬಹಳ ಪತ್ರಿಕೆಗಳಲ್ಲಿ ಕೂಡ ಇದು ಬಂದಿತ್ತು.

ಉಪಾಧ್ಯಕ್ಷರು :– ಪ್ರಶ್ನೆ ಕೇಳಿ.

ಶ್ರೀ ಎಂ. ಚಂದ್ರಪ್ಪ :– ಈರುಳ್ಳಿ ಬೆಳೆದಂಥ ಬೆಳೆ ಮಾರಾಟ ಅನುಕೂಲ ಸಿಗದೆ ಲಾರಿ ಬಾಡಿಗೆ ಕೂಡ ಸಿಗದೇ ಇದ್ದಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದ್ದರಿಂದ ಈ ಬೆಳೆಯನ್ನು ಇಟ್ಟುಕೊಳ್ಳುವುದಕ್ಕೆ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯನ್ನು ಸರ್ಕಾರ ಚಿತ್ರದುರ್ಗ ದಲ್ಲಿ ಮಾಡಬೇಕು ಮತ್ತು ಸರಿಯಾದಂಥ ವೇಳೆಯಲ್ಲಿ ಅಂದರೆ 1995-96 ನೇ ಸಾಲಿನಲ್ಲೇ ಮಾಡಬೇಕೆಂದು ಮಾನ್ಯ ಸಚಿವರನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ :– ಮಾನ್ಯ ಉಪಾಧ್ಯಕ್ಷರೇ, ನಾನು ಉತ್ತರವನ್ನು ಸರಿಯಾಗಿಯೇ ಕೊಟ್ಟಿದ್ದೇನೆ. ಅವರು ಯಾವರೀತಿ ಪ್ರಶ್ನೆ ಕೇಳಿದ್ದಾರೋ ಆ ರೀತಿ ಉತ್ತರ ವನ್ನು ಕೊಟ್ಟಿದ್ದೇನೆ. ನನಗೇನಿಲ್ಲ. ಇವತ್ತು ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ತೋಟ ಗಾರಿಕೆ ಉತ್ಪನ್ನವನ್ನು ರೈತರು ಹೆಚ್ಚುಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇದರ ಜೊತೆಗೆ ಸಾಕಷ್ಟು ಸೌಲಭ್ಯ ಇಲ್ಲದೆ ಅಂದರೆ ಶೇಖರಣೆ ಸೌಲಭ್ಯ ಮತ್ತು ಸಂಗ್ರಹಣೆ, ಸಂಸ್ಕರಣ ಸೌಲಭ್ಯ ಇವೆಲ್ಲ ಇಲ್ಲದೇನೆ ಉತ್ಪಾದನೆ ಮಾಡಿದ್ದರಲ್ಲಿ ಸುಮಾರು 30 ಪರ್ಸೆಂಟ್ ನಷ್ಟು ನಾಶವಾಗುತ್ತಿದೆ. ಅದಕ್ಕೋಸ್ಕರ ಈಗ ಸುಮಾರು 100 ಕೋಟಿ ರೂಪಾಯಿ ಅಂದಾಜಿನಲ್ಲಿ ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರದ ಎನ್.ಸಿ.ಡಿ.ಸಿ ಯವರಿಗೆ ನಾವು ಕಳುಹಿಸಿದ್ದೇವೆ. ಈಗಾಗಲೇ ಅವರು ತತ್ವಶಃ ಒಪ್ಪಿಕೊಂಡಿದ್ದಾರೆ. ಬಹುಶಃ ಈಗಾಗಲೇ ಡೆಲ್ಲಿಯಿಂದ ತಂಡ ಕೂಡ ವೀಕ್ಷಣೆಗೆ ಬರುತ್ತಿದ್ದಾರೆ. ಅದು ಬಂದನಂತರ ಇಡೀ ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಸುಮಾರು 9 ಕೋಲ್ಡ್ ಸ್ಟೋರೇಜ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ ಚಿತ್ರದುರ್ಗ ಸೇರಿಲ್ಲ. ಆದರೆ ಮುಂದಿನ ಸಾರಿ ಖಂಡಿತವಾಗಿ ಚಿತ್ರದುರ್ಗ ಜಿಲ್ಲೆ ಯನ್ನು ಕೋಲ್ಡ್ ಸ್ಟೋರೇಜ್‌ಗೆ ತೆಗೆದುಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

ಉಪಾಧ್ಯಕ್ಷರು :- ಕೃಷಿ ಸಚಿವರು ಏನೋ ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿ) :- ಮಾನ್ಯ ಉಪ ಸಭಾಧ್ಯಕ್ಷರೇ, ಇವತ್ತು ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್ ಎಂಬ ಒಂದು ಸಂಸ್ಥೆ ಇದೆ. ಅವರು ಬಂದು ನನ್ನನ್ನು ಕೂಡ ಭೇಟಿಯಾಗಿದ್ದಾರೆ. ಕೆಲವು ಕಡೆ ಅವರಿಗೆ ಜಾಗ ಕೊಟ್ಟರೆ ಕೋಲ್ಡ್ ಸ್ಟೋರೇಜ್ ಗಳನ್ನು ಕಟ್ಟುತ್ತೇವೆ ಎಂಬ ಆಶ್ವಾಸನೆಯನ್ನು ನನಗೆ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಅವರ ಅವಶ್ಯಕತೆ ಇದ್ದಂಥ ಕಡೆ ನಾಲ್ಕು ಎಕರೆ ಜಾಗವನ್ನು ಕೊಟ್ಟರೆ, ಒಳ್ಳೆಯದು. ಏಕೆಂದರೆ ಅವರು ನಾಲ್ಕು ಎಕರೆ ಜಾಗ ಬೇಕೆಂದು ಹೇಳುತ್ತಾರೆ. ನಾಲ್ಕು ಎಕರೆ ಸರ್ಕಾರಿ ಜಾಗವನ್ನು ಅವರಿಗೆ ಉಚಿತವಾಗಿ ಕೊಡಬೇಕಾಗುತ್ತದೆ. ಅದನ್ನು ಕೊಟ್ಟರೆ ಅವಶ್ಯಕತೆಯನ್ನು ನೋಡಿಕೊಂಡು ಎಲ್ಲಾ ಕಡೆಯಲ್ಲೂ ಕೋಲ್ಡ್ ಸ್ಟೋರೇಜ್‌ಗಳನ್ನು ಕಟ್ಟುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ.

ಶ್ರೀ ಎಂ. ಚಂದ್ರಪ್ಪ :- ಚಿತ್ರದುರ್ಗದಲ್ಲಿ ನಾಲ್ಕು ಎಕರೆ ಜಾಗವನ್ನು ನಾವು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. 1995-96 ನೇ ಸಾಲಿನಲ್ಲಿ ಕೋಲ್ಡ್ ಸ್ಟೋರೇಜ್ ಅನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :- ಆಗಬಹುದು. ಜಾಗವನ್ನು ಕೊಡಿಸತಕ್ಕಂಥ ಏರ್ಪಾಡನ್ನು ಅವರು ಮಾಡಲಿ. ಆ ಮೇಲೆ ನೋಡೋಣ.

ಶ್ರೀ ಕೆ. ಶ್ರೀನಿವಾಸಗೌಡ :- ಈರುಳ್ಳಿಯನ್ನು ಮಾನ್ಯ ಸದಸ್ಯರು ಹೇಳಿದಹಾಗೆ ಕೋಲ್ಡ್ ಸ್ಟೋರೇಜ್ ನಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಏಕೋ ಇದನ್ನು ಹೇಳಬೇಕಾಗಿತ್ತು, ಹೇಳಲಿಲ್ಲ. ಕೋಲ್ಡ್ ಸ್ಟೋರೇಜ್‌ನಲ್ಲಿ ಈರುಳ್ಳಿಯನ್ನು ಇಟ್ಟರೆ ಅದು ಕೊಳೆತುಹೋಗುತ್ತದೆ. ಹಾಗಾಗಿ ಅದಕ್ಕೆ ಬೇರೆ ವಿಧವಾದಂಥ ಗೋಡೌನ್ ಅನ್ನು ಕಟ್ಟಬಹುದೇ ವಿನಹ ಕೋಲ್ಡ್ ಸ್ಟೋರೇಜ್‌ನಲ್ಲಿ ಈರುಳ್ಳಿಯನ್ನು ಇಡುವುದಕ್ಕೆ ಆಗುವುದಿಲ್ಲ. ಇದುವರೆಗೂ ಹೀಗೆ ಈರುಳ್ಳಿಯನ್ನು ಇಟ್ಟಿಲ್ಲ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಚಂದ್ರಣ್ಣ :- ಉಳ್ಳಾಗಡ್ಡಿ ಬೆಳೆಯತಕ್ಕಂಥ ಪ್ರದೇಶವೆಂದರೆ ದೇವನಹಳ್ಳಿ ತಾಲ್ಲೂಕು ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕು. ದಯವಿಟ್ಟು ಇಲ್ಲಿ ನಮಗೆ ಕೋಲ್ಡ್ ಸ್ಟೋರೇಜ್ ಅನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಒತ್ತಾಯ ಮಾಡಿದ್ದರೂ ಕೂಡ ಸರ್ಕಾರ ಇದುವರೆಗೂ ಗಮನಹರಿಸಿಲ್ಲ. ಕೋಲಾರ ಜಿಲ್ಲೆಗೆ ಇದನ್ನು ಕೊಡಬೇಕು ಮಾನ್ಯ ಮಂತ್ರಿಗಳು ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು :- ನಾಲ್ಕು ಎಕರೆ ಜಮೀನು ಕೊಟ್ಟರೆ ಮಾಡುತ್ತೇವೆ ಎಂದು ಅವರು ಹೇಳಿದ್ದಾರಲ್ಲಾ?

ಶ್ರೀ ಚಂದ್ರಶೇಖರ ಎಂ. ಮಾಮನಿ :- ಬೆಳಗಾಂ ಜಿಲ್ಲೆಯಲ್ಲಿ ಕೂಡ ಬೆಂಗಳೂರಿನಲ್ಲಿರುವ ಹಾಪ್‌ಕಾಮ್ಸ್ ಮಾದರಿ ಸಂಸ್ಥೆಯನ್ನು 94-95 ರಲ್ಲಿ ಆಳವಡಿಸಿ ಮಾಡುತ್ತೇವೆ

ಎಂದಿದ್ದರೂ, ಅಲ್ಲಿ ಯಾವುದೇ ಕಾರ್ಯಕ್ರಮ ಇದುವರೆಗೂ ಆಗಿಲ್ಲ. ಅಲ್ಲಿ ಯಾವಾಗ ಮಾಡುತ್ತೀರಿ? ಒಬ್ಬ ಅಧಿಕಾರಿ ಕೂಡ ಇಲ್ಲ. ಒಬ್ಬರನ್ನು ಇನ್‌ಚಾರ್ಜ್ ಆಗಿ ಇಟ್ಟಿದ್ದಾರೆಯೇ ಹೊರತು ಬೇರೆ ಏನೂ ವ್ಯವಸ್ಥೆ ಇಲ್ಲ. ಆದ್ದರಿಂದ ಉತ್ತರ ಕರ್ನಾಟಕದೊಳಗೆ ಬೆಳೆಗಾರರ ಬೆಳೆಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಮತ್ತು ಇದರ ಬಗ್ಗೆ ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ :- ಮಾನ್ಯ ಶ್ರೀನಿವಾಸಗೌಡ ಅವರು ಹೇಳಿದ ಪ್ರಕಾರ ಈರುಳ್ಳಿಯನ್ನು ಶೀತಲಗೃಹದಲ್ಲಿ ಇಡುವುದಕ್ಕೆ ಬರುವುದಿಲ್ಲ. ಆದರೆ ಶೇಖರಣಾ ಕೊಠಡಿಯನ್ನು ಕಟ್ಟಿಕೊಡಬೇಕೆಂದು ತೀರ್ಮಾನಮಾಡಿದೆ. ಆದರೆ ಮಾನ್ಯ ಚಂದ್ರಣ್ಣ ಅವರ ಪ್ರಶ್ನೆ ಇದೆ. ತರಕಾರಿಗಳನ್ನು ನಾಶವಾಗದ ರೀತಿಯಲ್ಲಿ ಇದನ್ನು ನಾವು ಮಾಡಕೊಡುತ್ತೇವೆ. ಮಾನ್ಯ ಮಾಮನಿಯವರು ಹಾಪ್‌ಕಾಮ್ಸ್ ರೀತಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಕೂಡ ಮಾಡಿ ಎಂದು ಹೇಳಿದ್ದಾರೆ. ಹಾಪ್‌ಕಾಮ್ಸ್ ರೀತಿಯಲ್ಲಿ ಬೆಳಗಾವಿಯಲ್ಲಿ ಮಾಡಲಿಕ್ಕೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಆದೇಶ ನೀಡಿದ್ದೇವೆ. ಈಗ ಹಾಪ್‌ಕಾಮ್ಸ್ ಮಾದರಿ ಜಿಲ್ಲಾ ತೋಟದ ಬೆಳೆಗಾರರ ಸಂಘ ಎಂದು ಮಾಡಿ ಈಗಾಗಲೇ ಕೆಲಸ ನಡೆಯುತ್ತಿದೆ. ಅದು ಹಾಪ್ ಕಾಮ್ಸ್ ಏನಿದೆ ಅದನ್ನೂ ಕೂಡ ಮಾಡುತ್ತದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಆರ್. ಯಾವಗಲ್ :- ಈರುಳ್ಳಿ ಬೆಳೆಯನ್ನು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಇವತ್ತಿನ ದಿವಸ ಅವರು ಉಪ ಯೋಗಿಸುವ ಚೀಲದ ಬೆಲೆ ಕೂಡ ಬರುವುದಿಲ್ಲ. ಈ ವರ್ಷ ಸಿಕ್ಕಾಪಟ್ಟೆ ಬೆಳೆ ಬರುವು ದಕ್ಕೆ ಸಾಧ್ಯತೆ ಇದೆ. ಇದನ್ನು ಸಮತೋಲನದಲ್ಲಿ ಇಡುವುದಕ್ಕೆ ಮತ್ತು ರೈತರಿಗೆ ಅನುಕೂಲ ವಾಗುವುದಕ್ಕೆ ಏನು ಗೋಡೌನ್ ಎಂದು ಹೇಳಿದರು, ಇದೂ ಕೂಡ ಸಂಸ್ಕರಣೆ ಘಟಕ ಅಥವಾ ಮತ್ತೊಂದು ಮಾಡುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿ ದ್ದೀರೋ?

ಶ್ರೀ ಟಿ. ಡಿ. ಜಯಕುಮಾರ್ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಾವಗಲ್ ರವರು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕೆಂದರೆ, ಆಲೂಗಡ್ಡೆಗೆ ಫುಡ್ ಪ್ರೊಸೆಸಿಂಗ್ ಮಾಡ ಬೇಕೆಂದು ಹೇಳಿ ನಮ್ಮ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಸಂಸ್ಕರಣೆ ವ್ಯವಸ್ಥೆಯಾಗಿ, ಮೀಟಿಂಗ್ ಗಳು ನಡೆಯುತ್ತಿವೆ. ಅದು ಆಲೂಗಡ್ಡೆಗೆ ಮಾಡಬಹುದು. ಆದರೆ ಈರುಳ್ಳಿಯಲ್ಲಿ ಯಾವುದೇ ಸಂಸ್ಕರಣೆ ಮಾಡುವುದಕ್ಕೆ ಆಗುವುದಿಲ್ಲ. ಇದು ಬೇರೆ ಬೇರೆ ರೀತಿಯಲ್ಲಿ ಗ್ರೇಡ್ ಮಾಡಿ ರೈತರಿಗೆ ಹೆಚ್ಚು ಬೆಲೆ ಬರುವುದಕ್ಕೆ ಶೇಖರಣೆ ಮಾಡಿ, ಬೆಲೆ ಹೆಚ್ಚಿಗೆ ಬರುವಾಗ ಬಿಡುಗಡೆ ಮಾಡುವುದು, ಅವರಿಗೆ ಸಾಲಸೌಲಭ್ಯ ಕೊಡುವುದು, ಇಷ್ಟು ಮಾಡಬಹುದು. ಆದರೆ ಸಂಸ್ಕರಣೆ ಮಾಡುವುದಕ್ಕೆ ಬರುವುದಿಲ್ಲ. ಆಲೂಗಡ್ಡೆಗೆ ಬೇಕಾದರೆ ಮಾಡಬಹುದು. ಅದನ್ನು ಈಗಾಗಲೇ ಫುಡ್ ಪ್ರೊಸೆಸಿಂಗ್ ಮಂತ್ರಿಗಳ ಮುಖಾಂತರ ಮಾಡುತ್ತಿದ್ದೇವೆ.

ಶ್ರೀ ಬಿ. ಆರ್. ಯಾವಗಲ್ :- ದಯವಿಟ್ಟು ತಮಗೆ ಮಾಹಿತಿ ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ನಾನು ಈರುಳ್ಳಿಯದ್ದೇ ಹೇಳುತ್ತಿದ್ದೇನೆ. ಸಂಸ್ಕರಣ ಮಾಡಬಹುದು

ಎಂದು ಇದೆ. ದಯವಿಟ್ಟು ನಾಸಿಕ್ ಪ್ರದೇಶಕ್ಕೆ ಹೋಗಿ ನೋಡಿ. ಅಲ್ಲಿ ಬೇಕಾದಷ್ಟು ಇದೆ. ಮಹಾರಾಷ್ಟ್ರದಲ್ಲಿ ಇದನ್ನು ಜಾಸ್ತಿ ಬೆಳೆಯುತ್ತಿದ್ದಾರೆ. ಅದನ್ನು ನೋಡಿಕೊಂಡು ಬನ್ನಿ.

ಉಪಾಧ್ಯಕ್ಷರು :- ನೋಡಿ ಪರಿಶೀಲನೆ ಮಾಡಿರಿ.

ವಿಷಯ:- ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರಿ ಬಸ್ಸುಗಳು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 394 (2958)

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಎಷ್ಟು ಬಸ್ಸುಗಳನ್ನು ಓದಗಿಸಲಾಗಿದೆ, ಅವುಗಳ ಸಂಖ್ಯೆ ತಿಳಿಸಿ;

ಆ) ಮುಂದೆ ಎಷ್ಟು ಬಸ್ಸುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ನಿಯೋಜಿಸಲಾಗಿದೆ;

ಇ) ಕೊರಟಗೆರೆ ತಾಲ್ಲೂಕಿಗೆ ಎಷ್ಟು ಬಸ್ಸುಗಳನ್ನು ಹೊಸ ಮಾರ್ಗಗಳಲ್ಲಿ ಸಂಚರಿಸುವಂತೆ ಮಾಡಲಾಗಿದೆ?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 140 ಹೆಚ್ಚುವರಿ ಅನುಸೂಚಿಗಳನ್ನು ರಾಷ್ಟ್ರೀಕೃತ ವಲಯದ ಗ್ರಾಮೀಣ ಮಾರ್ಗಗಳಲ್ಲಿ ಓಡಿಸಲು ಯೋಚಿಸಿದೆ. ಈ ಪೈಕಿ 58 ಅನುಸೂಚಿಗಳನ್ನು ಈಗಾಗಲೇ ಪ್ರಾರಂಭಿಸಿದೆ.

ಆ) ಉಳಿದ 82 ಅನುಸೂಚಿಗಳನ್ನು 1996 ರ ಮಾರ್ಚ್ ತಿಂಗಳ ಅಂತ್ಯದೊಳಗೆ ಪ್ರಾರಂಭಿಸಲಾಗುವುದು.

ಇ) ಪ್ರಯಾಣಿಕರ ಬಸ್ಸು ಸಾರಿಗೆಯನ್ನು ಕೊರಟಗೆರೆ ತಾಲ್ಲೂಕಿನಲ್ಲಿ ರಾಷ್ಟ್ರೀಕರಿಸಿರುವುದಿಲ್ಲ. ಖಾಸಗಿ ವಾಹನ ಮಾಲೀಕರು ಈ ತಾಲ್ಲೂಕಿನಲ್ಲಿ ತಮ್ಮ ಬಸ್ಸುಗಳನ್ನು ಪ್ರಧಾನವಾಗಿ ಆಚರಿಸುತ್ತಿದ್ದಾರೆ. ರಾಷ್ಟ್ರೀಕರಣವಲ್ಲದ ವಲಯದಲ್ಲಿ ಹೊಸ ಮಾರ್ಗಗಳನ್ನು ಪ್ರಾರಂಭಿಸುವ ಯೋಜನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವುದಿಲ್ಲ.

12.20 ಪಿ. ಎಂ.

ಶ್ರೀ ಸಿ. ಚೆನ್ನಿಗಪ್ಪ :- ಮಾನ್ಯ ಅಧ್ಯಕ್ಷರೇ, ಕೊರಟಗೆರೆ ತಾಲ್ಲೂಕಿನಲ್ಲಿ ಸುಮಾರು 690 ಹಳ್ಳಿಗಳಿದ್ದು, 8 ರಿಂದ 10 ಬಸ್ಸುಗಳು ಮಾತ್ರ ಓಡಾಡುತ್ತಿವೆ. ಸಾರಿಗೆ ಸಚಿವರಿಗೆ ಸುಮಾರು 4-5 ಅರ್ಜಿಗಳನ್ನು ಕೊಟ್ಟು ಕೇಳಿಕೊಂಡಾಗ ಕೂಡ, ಯಾವ ಬಸ್ ಸೌಕರ್ಯ ಕೊಟ್ಟಿಲ್ಲ. ಅದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಂಡು ಕೇಳುತ್ತೇನೆ. ಈ ವಿಷಯದಲ್ಲಿ ಉತ್ತರ ಕೊಡಬೇಕಾಗಿ ವಿನಂತಿಸುತ್ತೇನೆ.